**<u>ಪ್ರಥಮ ಅಪರ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ಧರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೈಲಹೊಂಗಲ.</u>**

**ಸಿ.ಸಿ.ನಂ. 786/2025**

ರಾಜ್ಯದ ಪರವಾಗಿ ನೇಸರಗಿ ಪೊಲೀಸ ಠಾಣೆ

**ಪಿರ್ಯಾದುದಾರರು.**

// ವಿರುದ್ದ //

1. ಸಂಗಪ್ಪ ಭೀಮಪ್ಪ ಹನಮನಿ ಹಾಗೂ ಇತರರು

**ಆರೋಪಿತರು.**

**ದೋಷಾರೋಪಣೆ**

ನಾನು ಬಸವರಾಜ ನಾಯಕ ಎಸ್.ಪಿ ಬಿ.ಎ.ಎಲ್.ಎಲ್.ಬಿ.ಎಲ್.ಎಲ್.ಎಂ ಪ್ರಥಮ ಆಪರ ದಿವಾಣಿ ನ್ಯಾಯಾಧೀಶರು ಹಾಗೂ ಅಪರ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಬೈಲಹೊಂಗಲ ಈ ಮೂಲಕ ಕೆಳಕಂಡಂತೆ ನಿಮ್ಮನ್ನು ಅಂದರೆಃ

1. ಸಂಗಪ್ಪ ಭೀಮಪ್ಪ ಹನಮನಿ
2. ಪುಂಡಲೀಕ ಭೀಮಪ್ಪ ಹನಮನಿ
3. ಪಕೀರಪ್ಪ ಸಂಗಪ್ಪ ಹನಮನಿ
4. ಸುರೇಶ ಸಂಗಪ್ಪ ಹನಮನಿ
5. ಮಲ್ಲವ್ವ ಗಂಡ ಸಂಗಪ್ಪ ಹನಮನಿ
   ಎಲ್ಲರೂ ಸಾಃ ಜಕ್ಕನಾಯ್ಕನಕೊಪ್ಪ, ತಾಃ ಬೈಲಹೊಂಗಲ

**ಈ ಕೆಳಗಿನ ಆರೋಪಕ್ಕೆ ಗುರಿಪಡಿಸುತ್ತಿದ್ದೆನೆ.**

ಅಭಿಯೋಜನೆಯವರು ನಿಮ್ಮ ಮೇಲೆ ಆರೋಪಿಸುವುದೇನೆಂದರೆ, ನೇಸರಗಿ ಪೋಲಿಸ ಠಾಣಾ ಸರಹದ್ದಿಯ ಪೈಕಿ ಜಕ್ಕನಾಯ್ಕನಕೊಪ್ಪ ಗ್ರಾಮ ಹದ್ದಿಯಲ್ಲಿ ತಮಗೆ ಹಾಗೂ ಪಿರ್ಯಾದಿಯವರಿಗೆ ಹಿತ್ತಲ ಜಾಗೆಯ ಸಲುವಾಗಿ ತಂಟೆ ತಕರಾರು ಇದ್ದು. ದಿಃ 23.02.2025 ರಂದು ಮುಂಜಾನೆ 9.00 ಗಂಟೆ ಸುಮಾರಿಗೆ ಆರೋಪಿತರಾದ ನೀವು ತಕರಾರು ಇವರು ಜಾಗೆಯಲ್ಲಿ ಕಾಂಪೌಂಡ ಗೋಡೆಯ ಪಾಯಾ ತೆಗೆಯುತ್ತಿದ್ದಾಗ, ಪಿರ್ಯಾದಿಯು ಪಾಯಾ ತೆಗೆಯಬೇಡ್ರಿ ಹಿರಿಯರನ್ನು ಕರೆಯಿಸಿ ಅಂತಾ ಅಂದಾಗ ಆರೋಪಿತರಾದ ನೀವೆಲ್ಲರೂ ಅಕ್ರಮಕೂಟ ಸೇರಿಕೊಂಡು, ಸಂಗನಮತ ಮಾಡಿಕೊಂಡು, ಈ ಮೂಲಕ ಭಾರತೀಯ ನ್ಯಾಯ ಸಂಹಿತೆಯ ಕಲಂ. 189(2) ಸಹ ಕಲಂ.190 ರ ಪ್ರಕಾರ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಎಸಗಿರುತ್ತೀರಿ?

ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಏಕೋದ್ದೇಶದಿಂದ ಅಕ್ರಮಕೂಟ ಕಟ್ಟಿಕೊಂಡು ಬಂದು ದೊಂಬಿ ಎಬ್ಬಿಸಿ ಪಿರ್ಯಾದಿಯವರ ಜೊತೆಗೆ ತಂಟೆ ತೆಗೆದು, ಈ ಮೂಲಕ ಭಾರತೀಯ ನ್ಯಾಯ ಸಂಹಿತೆಯ ಕಲಂ. 191(2) ಸಹ ಕಲಂ.190 ರ ಪ್ರಕಾರ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಎಸಗಿರುತ್ತೀರಿ?

ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಏಕೋದ್ದೇಶವನ್ನು ಈಡೇರಿಸಿಕೊಳ್ಳಲು ಅಪರಾಧಿಕ ಕೃತ್ಯ ಎಸಗುವ ಉದ್ದೇಶದಿಂದ ಮಾರಕ ಆಯುಧವನ್ನು (ಇಟ್ಟಂಗಿ, ಕಟ್ಟಿಗೆ ಮತ್ತು ಚಾಕು) ಹೊಂದಿ ದೊಂಬಿಯನ್ನು ಉಂಟುಮಾಡುವ ಮೂಲಕ ಭಾರತೀಯ ನ್ಯಾಯ ಸಂಹಿತೆಯ ಕಲಂ. 191(3) ಸಹ ಕಲಂ.190 ರ ಪ್ರಕಾರ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಎಸಗಿರುತ್ತೀರಿ?

ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳದಲ್ಲಿ 5ನೇ ಆರೋಪಿತರಾದ ನೀವು ಪಿರ್ಯಾದಿಗೆ ಕೈಇಂದ ಹೊಡಿಬಡಿ ಮಾಡಿದ್ದು, 2ನೇ ಆರೋಪಿಯಾದ ನೀವು ಇಟ್ಟಂಗಿಯಿಂದ ಪಿರ್ಯಾದಿ ಎದೆಗೆ ಒಗೆದಿದ್ದು ಅಲ್ಲದೆ ಚಾಕುವಿನಿಂದ ಹಲ್ಲೆ ಮಾಡಿ ಪಿರ್ಯಾದಿ ಬೆರಳಿಗೆ ಗಾಯ ಪಡಿಸಿದ್ದು, ಈ ಮೂಲಕ ಭಾರತೀಯ ನ್ಯಾಯ ಸಂಹಿತೆಯ ಕಲಂ.115(2) ಸಹ ಕಲಂ.190 ರ ಪ್ರಕಾರ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಎಸಗಿರುತ್ತೀರಿ?

ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳದಲ್ಲಿ 2ನೇ ಆರೋಪಿತಯಾದ ನೀವು ಸಾಕ್ಷಿದಾರ 06 ಮತ್ತು 07 ಇವರಿಗೆ ಚಾಕುವಿನಿಂದ ಹಲ್ಲೆ ಮಾಡಿ ಸಾದಾ ಗಾಯ ಪಡಿಸಿದ್ದು ಹಾಗೂ 03ನೇ ಆರೋಪಿತಯಾದ ನೀವು ಸಾಕ್ಷಿದಾರ 04 ಇವರಿಗೆ ಕಟ್ಟಿಗೆಯಿಂದ ಹಲ್ಲೆ ಮಾಡಿ ಸಾದಾ ಗಾಯ ಪಡಿಸಿದ್ದು ಈ ಮೂಲಕ ಭಾರತೀಯ ನ್ಯಾಯ ಸಂಹಿತೆಯ ಕಲಂ. 118(1) ಸಹ ಕಲಂ.190 ರ ಪ್ರಕಾರ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಎಸಗಿರುತ್ತೀರಿ?

ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳದಲ್ಲಿ 2ನೇ ಆರೋಪಿಯಾದ ನೀವು ಜಗಳವನ್ನು ಬಿಡಿಸಲು ಬಂದ ಸಾಕ್ಷಿದಾರ ಅ.ನಂ.05 ಇವರಿಗೆ ಚಾಕುವಿನಿಂದ ಹಲ್ಲೆ ಮಾಡಿ ಭಾರಿ ಗಾಯಪಡಿಸಿದ್ದು, ಈ ಮೂಲಕ ಭಾರತೀಯ ನ್ಯಾಯ ಸಂಹಿತೆಯ ಕಲಂ. 118(2) ಸಹ ಕಲಂ.190 ರ ಪ್ರಕಾರ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಎಸಗಿರುತ್ತೀರಿ?

ಮೇಲೆ ಹೇಳಿದ ದಿನಾಂಕ, ಸಮಯ ಸ್ಥಳದಲ್ಲಿ ಆರೋಪಿತರಾದ ನೀವುಗಳು ಪಿರ್ಯಾದಿಯವರಿಗೆ ಅವಾಚ್ಯ ಶಬ್ದಗಳಿಂದ ಬೈದಿದ್ದು, ಈ ಮೂಲಕ ಭಾರತೀಯ ನ್ಯಾಯ ಸಂಹಿತೆಯ ಕಲಂ.352 ಸಹ ಕಲಂ.190ರ ಪ್ರಕಾರ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಎಸಗಿರುತ್ತೀರಿ?

ಮೇಲೆ ಹೇಳಿದ ದಿನಾಂಕ, ಸಮಯ ಸ್ಥಳದಲ್ಲಿ ಆರೋಪಿತರಾದ ನೀವುಗಳು ಪಿರ್ಯಾದಿಯವರಿಗೆ ಹಾಗೂ ಸಾಕ್ಷಿದಾರಗಿಗೆ ಜೀವದ ಧಮಕಿ ಹಾಕಿದ್ದು ಈ ಮೂಲಕ ಭಾರತೀಯ ನ್ಯಾಯ ಸಂಹಿತೆಯ ಕಲಂ.351(2) ಸಹ ಕಲಂ.190 ರ ಪ್ರಕಾರ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಎಸಗಿರುತ್ತೀರಿ?

ಪ್ರಶ್ನೆ 1. ಈ ಮೇಲಿನ ದೋಷಾರೋಪಣೆಯ ಸಾರಾಂಶ ನಿಮಗೆ ಅರ್ಥವಾಯಿತೇ?

ಉತ್ತರಃ ಆ 1 ರಿಂದ 5:

ಪ್ರಶ್ನೆ 2.ಈ ಮೇಲಿನ ಆಪಾಧನೆಯನ್ನು ನೀವು ಒಪ್ಪಿಕೊಳ್ಳುವಿರಾ? ಅಥವಾ ವಿಚಾರಣೆಯನ್ನು ನಡೆಸುವಿರಾ?

ಉತ್ತರಃ ಆ 1 ರಿಂದ 5:

(ಈ ಮೇಲಿನ ದೋಷಾರೋಪಣೆ ಸಾರಾಂಶವನ್ನು ಆರೋಪಿತರಿಗೆ ತಿಳಿಯುವ ಭಾಷೆಯಲ್ಲಿ ಓದಿ ವಿವರಿಸಿ ಹೇಳಲಾಯಿತು. ಈ ದಾಖಲೆಯು ಆರೋಪಿತರು ನೀಡಿದ ನಿಜವಾದ ಮತ್ತು ಅವರ ಪೂರ್ಣವಾದ ಹೇಳಿಕೆಯನ್ನು ಒಳಗೊಂಡಿದೆ ಎಂದು ಈ ಮೂಲಕ ದೃಡೀಕರಿಸಲಾಗಿದೆ.)

ಸಹಿ/-

ದಿಃ13.02.2026 **ಪ್ರ.ಆ.ದಿ.ನ್ಯಾ .ಪ್ರ.ದ.ನ್ಯಾ .ದಂ.ಬೈಲಹೊಂಗಲ**